## ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ.ಎ. ತಿಪ್ಪೇಸ್ವಾಮಿ ಇವರು ನಿಯಮ 330 ರಡಿ ಪ್ರಸ್ತಾಪಿಸಿರುವ ಸೂಚನೆಗೆ ಮಾಹಿತಿ

### ಸೂಚನೆ:

"ಕರ್ನಾಟಕ ರಾಜ್ಯ ಅಪೆಕ್ಸ್, ಬೆಂಗಳೂರು ಇದರಲ್ಲಿ 2018-19, 2019-20 ಮತ್ತು 2020-21 ನೇ ಸಾಲಿನಲ್ಲಿ ನಡೆದಿದೆ ಎನ್ನಲಾದ ಕೋಟ್ಯಂತರ ರೂಪಾಯಿಗಳ ಅವ್ಯವಹಾರಗಳ ಕುರಿತು ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ರ ಅಡಿ ವಿಚಾರಣೆಗೆ ಆದೇಶಿಸಿದ್ದು, ವಿಚಾರಣಾ ವರದಿ ಮೇಲೆ 68 ರ ಆದೇಶ ಮಾಡಿದ್ದರೂ ಪುನಹ ಇದನ್ನು ಸಹಕಾರ ಸಂಘಗಳ ಅಪರ ನಿಬಂಧಕರು ವಿತ್ ಡ್ರಾ ಮಾಡಿದ್ದಾರೆ. ಕಲಂ 64 ರ ವಿಚಾರಣೆ ವರದಿಯಲ್ಲಿ ಅವ್ಯವಹಾರಗಳನ್ನು ಮುಚ್ಚಿಹಾಕಿರುವ ವಿಚಾರಣಾಧಿಕಾರಿಯಾದ ನಿವೃತ್ತಿ ಅಂಚಿನಲ್ಲಿರುವ ಅಂದಿನ ಕಾನೂನು ಕೋಶದ ಜಂಟಿ ನಿಬಂಧಕರ ವಿರುದ್ಧ ಅಪೂರ್ಣ ವರದಿಯನ್ನು ಸಲ್ಲಿಸಿದ್ದು, ಸದರಿ ವಿಚಾರಣಾಧಿಕಾರಿಗಳ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ ಕಲಂ 109 ರ ಅಡಿಯಲ್ಲಿ ಕ್ರಿಮಿನಲ್ ಮೊಕದ್ದಮೆ ಹೂಡಲು ಸಹಕಾರ ಇಲಾಖೆಯ ಕಾರ್ಯದರ್ಶಿಗಳು ಸಹಕಾರ ಸಂಘಗಳ ನಿಬಂಧಕರಿಗೆ ಸೂಚಿಸಿದ್ದರೂ ಸಹ ಇದುವರೆಗೂ ಯಾವುದೇ ಕ್ರಮವಿಡದೆ ರಕ್ಷಿಸುತ್ತಿರುವುದು ಕಂಡುಬರುತ್ತದೆ. 2019-20, 2020-21 ನೇ ಸಾಲಿನಲ್ಲಿ ಅಪೆಕ್ಸ್ ಬ್ಯಾಂಕ್ ವಿರುದ್ಧ ಸಹಕಾರ ಸಂಘಗಳ ಕಲಂ 64 ರ ಅಡಿ ಸದರಿ ವಿಚಾರಣಾಧಿಕಾರಿಗಳು ಕಾಯ್ದೆ ಕಲಂ 64 ರ ರೀತ್ಯಾ ವಿಚಾರಣೆ ನಡೆಸದೆ ನಿಯಮಾವಳಿಗಳನ್ನು ಗಾಳಿಗೆ ತೂರಿ ಸತ್ಯಾಂಶಗಳನ್ನು ಉದ್ದೇಶಪೂರ್ವಕವಾಗಿ ಮರೆಮಾಚಿ ವಿಚಾರಣೆಗೆ ಒಳಪಡಿಸಿರುವ ದೂರಿನಂಶಗಳು ಹಾಗೂ ವ್ಯಕ್ತಿಗಳ ವಿರುದ್ಧ ಬಂದಿರುವ ದೂರುಗಳನ್ನು ತಮ್ಮ ವರದಿಯಲ್ಲಿ ಲಭ್ಯ ದಾಖಲಾತಿಗಳನ್ನು ಸರಿಯಾದ ರೀತಿಯಲ್ಲಿ ಪರಿಶೀಲಿಸದೆ ಮೇಲ್ನೋಟಕ್ಕೆ ವಿಚಾರಣೆ ನಡೆಸುವ ರೀತಿ ದಾಖಲಾತಿಗಳನ್ನು ಸೃಷ್ಟಿಸಿ ಕಲಂ 64 ರ ಮೌಲ್ಯವನ್ನು ವಿಚಾರಣೆಯಲ್ಲಿ ಅಳವಡಿಸಿಕೊಳ್ಳದೆ ತಪ್ಪು ವರದಿಯನ್ನು ನೀಡಿರುವುದು ಕಲಂ 64 ರ ವರದಿಯಲ್ಲಿ ಸ್ಪಷ್ಟವಾಗಿರುತ್ತದೆ. ಏಕೆಂದರೆ ಸದರಿ ವಿಚಾರಣಾಧಿಕಾರಿಗಳು ವಿಚಾರಣಾ ಅಂಶಗಳಿಗೆ ಸಂಬಂಧಿಸಿದಂತೆ ಕೇವಲ ವಾಸ್ತವ ಅಂಶಗಳ ಆಧಾರದಲ್ಲಿ ವರದಿ ನೀಡುವ ಬದಲಾಗಿ ಹೆಚ್ಚಿನ ಸನ್ನಿವೇಶಗಳಲ್ಲಿ ಬ್ಯಾಂಕಿನ ಅಂದಿನ ಅಧ್ಯಕ್ಷರು ಹಾಗೂ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು ನೀಡುವ ಹೇಳಿಕೆಗಳನ್ನು ಬಳಸಿಕೊಂಡು ದೂರಿಗೆ ಒಳಗಾಗಿರುವ ಪರವಾಗಿ ಸಮರ್ಥನೀಯವಾಗಿ ತಮ್ಮ ವರದಿಯಲ್ಲಿ ವರದಿಸಿರುವುದು ಕಂಡುಬಂದಿರುತ್ತದೆ. ಅಪೆಕ್ಸ್ ಬ್ಯಾಂಕಿನಲ್ಲಿ ನಡೆದಿರುವ ಕೋಟ್ಯಂತರ ರೂಪಾಯಿಗಳ ಅವ್ಯವಹಾರಗಳಲ್ಲಿ ಸಹಕಾರ ಇಲಾಖಾಧಿಕಾರಿಗಳು ಶಾಮೀಲಾಗಿ ಪ್ರಕರಣವನ್ನು ಮುಚ್ಚಿಹಾಕುವ ಹುನ್ನಾರ ನಡೆಸುತ್ತಿರುತ್ತಾರೆ. ಆದುದರಿಂದ ಸಾರ್ವಜನಿಕರ ಹಿತದೃಷ್ಟಿಯಿಂದ ಅಪೆಕ್ಸ್ ಬ್ಯಾಂಕಿನಲ್ಲಿ ನಡೆದಿರುವ ಕೋಟ್ಯಂತರ ರೂಪಾಯಿಗಳ ಅವ್ಯವಹಾರಗಳ ಸಂಬಂಧ ಈವರೆಗೂ ನಡೆದಿರುವ ಎಲ್ಲಾ ವಿದ್ಯಾಮಾನಗಳ ಬಗ್ಗೆ ಸಿ.ಬಿ.ಐ ಮುಖೇನ ಸಮಗ್ರವಾಗಿ ತನಿಖೆಯನ್ನು ನಡೆಸಿ, ತಪ್ಪಿತಸ್ಥರ ವಿರುದ್ಧ ಕಾನೂನು ರೀತ್ಯಾ ಶಿಸ್ತು ಕ್ರಮ ಜರುಗಿಸುವ ವಿಷಯದ ಬಗ್ಗೆ ಮಾನ್ಯ ಸಹಕಾರ ಸಚಿವರಲ್ಲಿ ಪ್ರಸ್ತಾಪಿಸ ಬಯಸುತ್ತೇನೆ."

### ಉತ್ತರ:-

ಕರ್ನಾಟಕ ರಾಜ್ಯ ಸಹಕಾರ ಅಪೆಕ್ಸ್ ಬ್ಯಾಂಕ್ ನಿ, ಬೆಂಗಳೂರು ಇದರ ಕಾರ್ಯನಿರ್ವಹಣೆ ಕುರಿತು ಬಂದ ದೂರು ಅರ್ಜಿಗಳಲ್ಲಿನ ಅಂಶಗಳನ್ನು ಬ್ಯಾಂಕಿನ ದಾಖಲಾತಿಗಳೊಂದಿಗೆ ಪರಿಶೀಲಿಸಲು ಸಹಕಾರ ಸಂಘಗಳ ನಿಬಂಧಕರ ದಿನಾಂಕ:30-04-2019 ರ ಆದೇಶದಲ್ಲಿ ಅಧಿಕಾರಿಗಳ ತಂಡವನ್ನು ನಿಯೋಜಿಸಲಾಗಿತ್ತು. ಪರಿಶೀಲನಾ ತಂಡವು ಅಪೆಕ್ಸ್ ಬ್ಯಾಂಕಿಗೆ ಭೇಟಿ ನೀಡಿ ದೂರು ಅರ್ಜಿಯಲ್ಲಿನ ಅಂಶಗಳನ್ನು ಪರಿಶೀಲಿಸಿ ದೂರು ಅರ್ಜಿಗಳಲ್ಲಿನ ಕೆಲವೊಂದು ಅಂಶಗಳು ಸಾಬೀತಾಗಿದ್ದು, ಹೆಚ್ಚಿನ ತನಿಖೆಯ

ಅವಶ್ಯವಿರುವುದರಿಂದ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ರ ವಿಚಾರಣೆ / 65 ಪರಿವೀಕ್ಷಣೆ ಅಥವಾ ಉನ್ನತ ಸಂಸ್ಥೆಯ ತನಿಖೆ ಅಗತ್ಯವೆಂದು ಅಭಿಪ್ರಾಯಪಟ್ಟು ನಿಬಂಧಕರಿಗೆ ವರದಿ ಸಲ್ಲಿಸಿರುತ್ತಾರೆ.

ಪರಿಶೀಲನಾ ತಂಡದ ವರದಿಯನ್ನಾಧರಿಸಿ ವಿಚಾರಣೆಗೆ ಒಳಪಡಿಸಬೇಕಾದ 10 ಅಂಶಗಳ ಬಗ್ಗೆ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959 ಕಲಂ 64 ರ ವಿಚಾರಣೆಗೆ ದಿನಾಂಕ:08-07-2019 ರಲ್ಲಿ ಆದೇಶಿಸಿ ಆರೋಪ 1 ಕ್ಕೆ ದಿ:31-12-2018 ರವರೆಗಿನ ವ್ಯವಹಾರಗಳನ್ನು, ಆರೋಪ 2 ಕ್ಕೆ ಸಂಬಂಧಿಸಿದಂತೆ 2013-14 ರಿಂದ 2018-19 ರವರೆಗಿನ ಅವ್ಯವಹಾರಗಳ ಬಗ್ಗೆ ವಿಚಾರಣೆ ನಡೆಸಲು ಸಹಕಾರ ಸಂಘಗಳ ಜಂಟಿ ನಿಬಂಧಕರು, ಬೆಂಗಳೂರು ಪ್ರಾಂತ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ವಿಚಾರಣಾಧಿಕಾರಿ, ವಿಚಾರಣೆಯನ್ನು ಪೂರ್ಣಗೊಳಿಸಿ ದಿನಾಂಕ:05-12-2019 ರಂದು ಸಹಕಾರ ಸಂಘಗಳ ಅಪರ ನಿಬಂಧಕರು(ಪತ್ತು) ಇವರಿಗೆ ವರದಿಯನ್ನು ಸಲ್ಲಿಸಿರುತ್ತಾರೆ. ಸಕ್ಷಮ ಪ್ರಾಧಿಕಾರಿ ಪರಿಶೀಲಿಸಿ ಅಂಗೀಕಾರಾರ್ಹ ಎಂದು ಮನದಟ್ಟಾದಲ್ಲಿ ಸದರಿ ವರದಿಯನ್ನು ಸಹಕಾರ ಸಂಘಗಳ ಕಾಯ್ದೆ ಕಲಂ 64(4) ರನ್ವಯ ಅಪೆಕ್ಸ್ ಬ್ಯಾಂಕಿಗೆ ಕಳುಹಿಸಿ 45 ದಿನಗಳ ಕಾಲಮಿತಿಯೊಳಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಬೇಕಿತ್ತು. ಆದರೆ ಆ ರೀತಿ ಕ್ರಮವಿಡದೆ ಅಂದಿನ ಸಹಕಾರ ಸಂಘಗಳ ಅಪರ ನಿಬಂಧಕರು(ಪತ್ತು) ರವರು ನೇರವಾಗಿ ಕಲಂ 68 ರ ಆದೇಶ ಹೊರಡಿಸಿ ವಿಚಾರಣೆಯಲ್ಲಿ ದೃಢಪಡದ ವಿಚಾರಣಾಂಶಗಳನ್ನು ಸಹ ದೃಢಪಟ್ಟಿದೆ ಎಂದು ಕಲಂ 68 ಆದೇಶ ಹೊರಡಿಸಿರುವುದು ಸಮಂಜಸವಾಗಿರುವುದಿಲ್ಲ. ಅಲ್ಲದೆ ಕಲಂ 68 ರ ಆದೇಶವನ್ನು ಮತ್ತು ವಿಚಾರಣಾ ವರದಿಯನ್ನು ಅಪೆಕ್ಸ್ ಬ್ಯಾಂಕಿಗೆ ಕಳುಹಿಸಿ 45 ದಿನಗಳ ಸಮಯಾವಕಾಶ ನೀಡಿ ಅನುಪಾಲನಾ ವರದಿಯನ್ನು ಸಲ್ಲಿಸಲು ದಿನಾಂಕ:14-05-2020 ರಂದು ಆದೇಶಿಸಿರುತ್ತಾರೆ. ದಿನಾಂಕ:14-07-2020 ರಂದು ಅಪೆಕ್ಸ್ ಬ್ಯಾಂಕಿನಿಂದ ಅನುಪಾಲನಾ ವರದಿ ಸಕ್ಷಮ ಪ್ರಾಧಿಕಾರಿಗೆ ಸಲ್ಲಿಕೆಯಾಗಿರುತ್ತದೆ.

ಅಪೆಕ್ಸ್ ಬ್ಯಾಂಕು ತನ್ನ ಅನುಪಾಲನಾ ವರದಿಯಲ್ಲಿ ಬ್ಯಾಂಕಿನ ವಿರುದ್ಧ ಬಂದ ಅನಾಮಧೇಯ ದೂರು ಅರ್ಜಿಯ ಆಧಾರದ ಮೇಲೆ ಒತ್ತಡಕ್ಕೆ ಒಳಗಾಗಿ ಕಲಂ 64 ರ ವಿಚಾರಣೆಗೆ ಆದೇಶಿಸಿದ್ದು, ಯಾವುದೇ ಅನಾಮಧೇಯ ದೂರು ಅರ್ಜಿ ಅಥವಾ ಪತ್ರಗಳ ಮೇಲೆ ಯಾವುದೇ ಕ್ರಮ ಅಗತ್ಯವಿರುವುದಿಲ್ಲ ಎಂಬ ಅಂಶವನ್ನು ಉಲ್ಲೇಖಿಸಿರುತ್ತಾರೆ. ಸದರಿ ಕಲಂ 64 ರ ವಿಚಾರಣೆಯು ಕಾನೂನು ದೃಷ್ಟಿಯಲ್ಲಿ ಊರ್ಜಿತವಾಗುವುದಿಲ್ಲವೆಂದು ತಿಳಿಸಿರುತ್ತಾರೆ. ಕಲಂ 64 ರ ವಿಚಾರಣೆಗೆ ಆದೇಶಿಸಿದ ಸಕ್ಷಮ ಪ್ರಾಧಿಕಾರಿಯೇ ಕಲಂ 64 ರ ವಿಚಾರಣಾಧಿಕಾರಿಯು ವಿಚಾರಣಾ ವರದಿಯನ್ನು ಸಹಕಾರ ಸಂಘಗಳ ಕಾಯ್ದೆಯ ಅವಕಾಶ ಕಲಂ 64(4) ರನ್ವಯ ಅಪೆಕ್ಸ್ ಬ್ಯಾಂಕಿಗೆ ವರದಿಯನ್ನು ಕಳುಹಿಸಿ ಅನುಪಾಲನೆಯನ್ನು ಸಲ್ಲಿಸಲು ಅವಕಾಶ ನೀಡಬೇಕಿತ್ತು. ಕಲಂ 64 ರ ವಿಚಾರಣಾ ವರದಿಯನ್ನು ಪುನರ್ ವಿಮರ್ಶಿಸಿ ಮತ್ತು ವಿಶ್ಲೇಷಿಸಿ ಎಲ್ಲಾ ವಿಚಾರಣಾಂಶಗಳ ಬಗ್ಗೆ ಕಲಂ 64 ರ ವಿಚಾರಣಾ ವರದಿಗೆ ವ್ಯತಿರಿಕ್ತವಾದ ಅಭಿಪ್ರಾಯವನ್ನು ವ್ಯಕ್ತಪಡಿಸಿ, ಹೊರಡಿಸಿರುವ ಕಲಂ 68 ರ ಆದೇಶ ಕಾಯ್ದೆ ಮತ್ತು ನಿಯಮಗಳನುಸಾರ ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

ಅಪೆಕ್ಸ್ ಬ್ಯಾಂಕು ಕಲಂ 68 ರ ಆದೇಶಕ್ಕೆ ದಿ:14.07.2020ಸಲ್ಲಿಸಿದ ಅನುಪಾಲನಾ ವರದಿಯನ್ನು ಒಪ್ಪಿರುವುದಿಲ್ಲ. ಈ ಕುರಿತು ದಿನಾಂಕ:25-08-2020 ರಂದು ಆದೇಶ ಹೊರಡಿಸಿ ಕಲಂ 68 ರ ನಿರ್ದೇಶನದನ್ವಯ ಕ್ರಮವಿಟ್ಟು ಕೈಗೊಂಡ ಕ್ರಮದ ಅನುಪಾಲನಾ ವರದಿಯನ್ನು 30 ದಿನಗಳೊಳಗಾಗಿ ಸಲ್ಲಿಸಲು ಅಪೆಕ್ಸ್ ಬ್ಯಾಂಕಿನ ಮುಖ್ಯಕಾರ್ಯನಿರ್ವಹಣಾಧಿಕಾರಿಯವರಿಗೆ ನಿರ್ದೇಶಿಸಲಾಗಿತ್ತು. ಅನುಪಾಲನಾ

ವರದಿ ಸಲ್ಲಿಸಲು ಪುನ: 15 ದಿನಗಳ ಕಾಲಾವಕಾಶ ಕೋರಿ ದಿನಾಂಕ:01-10-2020 ರಂದು ಬ್ಯಾಂಕಿನವರು ಪತ್ರ ಸಲ್ಲಿಸಿರುತ್ತಾರೆ.

ಸರ್ಕಾರದ ಪತ್ರ ದಿನಾಂಕ:04-09-2020 ರ ಪತ್ರದಲ್ಲಿ ಕಲಂ 64 ರ ವಿಚಾರಣಾಧಿಕಾರಿಗಳು ಕರ್ತವ್ಯಲೋಪವೆಸಗಿದ್ದಲ್ಲಿ, ಅವರ ಕರ್ತವ್ಯಲೋಪದ ವಿರುದ್ಧ ಶಿಸ್ತು ಕ್ರಮ ಪ್ರಾರಂಭಿಸಬೇಕೆ ಹಾಗೂ ಕಾಯ್ದೆ 1959 ರ ಪ್ರಕರಣ 109 ಅವಕಾಶದಂತೆ ಕ್ರಮ ಕೈಗೊಳ್ಳುವ ಕುರಿತು ಅಪೇಕ್ಷಿಸಿದ ಮಾಹಿತಿಗೆ, ನಿಬಂಧಕರು ದಿನಾಂಕ:09-10-2020 ರಂದು ಸರ್ಕಾರಕ್ಕೆ ಪತ್ರ ಬರೆದು ವಿಚಾರಣಾಧಿಕಾರಿಯ ಕರ್ತವ್ಯ ಲೋಪದ ವಿರುದ್ಧ ಶಿಸ್ತು ಕ್ರಮಕ್ಕೆ ಶಿಫಾರಸ್ಸು ಮಾಡುವ ಅಧಿಕಾರವು ಕಲಂ 64 ರ ವಿಚಾರಣೆಗೆ ಆದೇಶಿಸಿದ ಹಾಗೂ ಕಲಂ 68 ರ ನಿರ್ದೇಶನ ನೀಡಿ ಆದೇಶಿದ ಸಕ್ಷಮ ಪ್ರಾಧಿಕಾರವಾದ ಸಹಕಾರ ಸಂಘಗಳ ಅಪರ ನಿಬಂಧಕರು (ಪತ್ತು) ಇವರಿಗೆ ಇರುತ್ತದೆ. ಆದರೆ, ಇದುವರೆಗೂ ವಿಚಾರಣಾಧಿಕಾರಿಯವರ ವಿರುದ್ದ ಶಿಸ್ತು ಕ್ರಮ ಜರುಗಿಸಲು ಶಿಫಾರಸ್ಸು ಮಾಡಿರುವುದಿಲ್ಲ. ಮುಂದುವರೆದ ವಿಚಾರಣೆಗೆ ಸಕ್ಷಮ ಪ್ರಾಧಿಕಾರಿಯು ದಿನಾಂಕ:17-10-2020 ರಂದು ಆದೇಶಿಸಿದ್ದು, ವರದಿಯನ್ನು ದಿನಾಂಕ:05-03-2021 ರಂದು ವಿಚಾರಣಾಧಿಕಾರಿಗಳು ಸಲ್ಲಿಸಿದ್ದು, ಕಲಂ 68 ರ ಆದೇಶಕ್ಕೆ ಪ್ರಕರಣ ಬಾಕಿ ಇರುವ ಹಿನ್ನೆಲೆಯಲ್ಲಿ ವಿಚಾರಣಾಧಿಕಾರಿಗಳ ವಿರುದ್ಧ ತಹಲ್‌ವರೆಗೆ ಕ್ರಮವಿಟ್ಟಿರುವುದಿಲ್ಲ.

10 ವಿಚಾರಣಾಂಶಗಳ ಬಗ್ಗೆ ಅಪೆಕ್ಸ್ ಬ್ಯಾಂಕಿನಲ್ಲಿ ಕಾರ್ಯನಿರ್ವಹಿಸಿದ ಸದರಿ ಅವಧಿಯ ಎಲ್ಲಾ ಆಡಳಿತ ಮಂಡಳಿ ಸದಸ್ಯರು, ಮುಖ್ಯಕಾರ್ಯನಿರ್ವಹಣಾಧಿಕಾರಿಗಳಿಂದ ಪ್ರಮಾಣೀಕರಿಸಿದ ಲಿಖಿತ ಹೇಳಿಕೆ, ಪ್ರಕರಣವಾರು ಸಂಬಂಧಪಟ್ಟ ದಾಖಲೆಗಳನ್ನು ಪಡೆದಿರುವುದು ಕಂಡುಬಂದಿರುವುದಿಲ್ಲ. ನಬಾರ್ಡ್ ಸುತ್ತೋಲೆ, ಸಾಲ ನಿಯಮಗಳು, ಸಕ್ಕರೆ ಸಾಲದ ನಿಯಮಗಳು, ಪಡೆದಿರುವ ಭದ್ರತೆ, ಸಾಲ ವಸೂಲಾತಿ, ಬ್ಯಾಂಕಿನ ಬೈಲಾ, ಆಡಳಿತ ಮಂಡಳಿ ಠರಾವುಗಳನ್ನು ಮತ್ತು ಸಂಬಂಧಪಟ್ಟ ಎಲ್ಲಾ ದಾಖಲಾತಿಗಳನ್ನು ಪುನ: ಪರಿಶೀಲಿಸಿ ಸಾಲ ಪಡೆದಿರುವ ಎಲ್ಲಾ ಸಕ್ಕರೆ ಕಾರ್ಖಾನೆಗಳ ಎಲ್ಲಾ ಪ್ರಕರಣಗಳನ್ನು ಪರಿಶೀಲಿಸಿ ದಾಖಲಾತಿಗಳೊಂದಿಗೆ ಸ್ಪಷ್ಟವಾಗಿ ಆರೋಪ ದೃಢಪಟ್ಟಿರುವ ಅಥವಾ ದೃಢಪಡದಿರುವ ಬಗ್ಗೆ ವಿಚಾರಣಾಧಿಕಾರಿ ನಮೂದಿಸಿ ಜವಾಬ್ದಾರಿ ನಿಗದಿಪಡಿಸಲು ಮುಂದುವರೆದ ವಿಚಾರಣೆಗೆ ಆದೇಶಿಸುವುದು ಸೂಕ್ತವೆಂದು ದಿನಾಂಕ:17-10-2020 ರಂದು 10 ವಿಚಾರಣಾಂಶಗಳನ್ನು ನಿಗದಿಪಡಿಸಿ ವಿಚಾರಣೆಗೆ ಆದೇಶಿಸಲಾಗಿತ್ತು.

ಮುಂದುವರೆದ ವಿಚಾರಣಾ ವರದಿಯನ್ನು ದಿನಾಂಕ:05-03-2021 ರಂದು ಸಕ್ಷಮ ಪ್ರಾಧಿಕಾರಿಗೆ ವರದಿ ಮತ್ತು ಅನುಬಂಧ-1 ರಿಂದ 53 (ಪುಟ ಸಂಖ್ಯೆ 1 ರಿಂದ 5723) ನ್ನು ಸಲ್ಲಿಸಿರುತ್ತಾರೆ.

ವರದಿಯನ್ನು ಪರಿಶೀಲಿಸಿ ಕಲಂ 64(4) ರನ್ವಯ ಈ ವರದಿಯನ್ನು ಬ್ಯಾಂಕಿಗೆ ದಿನಾಂಕ:08-11-2021 ರಂದು ಕಳುಹಿಸಿ 45 ದಿವಸಗಳ ಸಮಯಾವಕಾಶ ನೀಡಿ ಅನುಪಾಲನಾ ವರದಿಯನ್ನು ಸಲ್ಲಿಸಲು ಆದೇಶಿಸಲಾಗಿತ್ತು.

ಅಪೆಕ್ಸ್ ಬ್ಯಾಂಕು ದಿನಾಂಕ:31-12-2021 ರಂದು ಅನುಪಾಲನಾ ವರದಿಯನ್ನು ಸಲ್ಲಿಸಿರುತ್ತದೆ. ಅಪೆಕ್ಸ್ ಬ್ಯಾಂಕಿನಿಂದ ಸಲ್ಲಿಕೆಯಾದ ಅನುಪಾಲನಾ ವರದಿಯನ್ನು ದಾಖಲೆಗಳೊಂದಿಗೆ ಪರಾಮರ್ಶಿಸಲಾಗುತ್ತಿದ್ದು, ಯಾವ ವಿಚಾರಣಾಂಶಕ್ಕೆ ಬ್ಯಾಂಕಿನಿಂದ ನೀಡಿರುವ ಅನುಸರಣಾ ವರದಿಯನ್ನು ಹಾಗೂ ವಿಚಾರಣಾಧಿಕಾರಿಗಳು ಸಲ್ಲಿಸಿರುವ 5723 ಪುಟಗಳ ಅನುಬಂಧಗಳನ್ನು ಪರಿಶೀಲಿಸಿ ಕಾನೂನು ಪ್ರಕಾರ

ಒಪ್ಪಬಹುದಾದ ಅಂಶಗಳನ್ನು ಅಂಗೀಕರಿಸಿ ಇನ್ನುಳಿದ ಅಂಶಗಳಿಗೆ ಸಂಬಂಧಪಟ್ಟಂತೆ ಕಲಂ 68 ರ ನಿರ್ದೇಶನಗಳನ್ನು ಆದ್ಯತೆಯ ಮೇರೆಗೆ ನೀಡಲಾಗುವುದು.

ಅಪೆಕ್ಸ್ ಬ್ಯಾಂಕಿನಲ್ಲಿ ನಡೆದಿರುವ ಅವ್ಯವಹಾರದ ಬಗ್ಗೆ ಸಹಕಾರ ಸಂಘಗಳ ಕಾಯ್ದೆ 1959 ರ ಕಲಂ 64 ರಡಿ ವಿಚಾರಣೆ ಮತ್ತು ಕಲಂ 68 ರಡಿ ನಿರ್ದೇಶನ ಹೊರಡಿಸಿ ನಿಯಮಾನುಸಾರ ಎಲ್ಲಾ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುತ್ತಿರುವುದರಿಂದ ಪ್ರಕರಣದ ಸಂಬಂಧ ಸಿ.ಬಿ.ಐ ತನಿಖೆಗೆ ಒಳಪಡಿಸುವ ಅಗತ್ಯತೆ ಕಂಡುಬರುವುದಿಲ್ಲ.

ಕೇಂದ್ರ ಸರ್ಕಾರದ ಮಾನ್ಯ ಗೃಹ ಮತ್ತು ಸಹಕಾರ ಸಚಿವಾಲಯದಿಂದ ಕೇಂದ್ರ ಸಹಕಾರ ಸಂಘಗಳ ನಿಬಂಧಕರು ದಿನಾಂಕ:21.02.2022 ರಂದು ಈ ಬಗ್ಗೆ ಬರೆದಿರುವ ಪತ್ರವು ಸಹಕಾರ ಸಂಘಗಳ ನಿಬಂಧಕರ ಕಛೇರಿಗೆ ದಿನಾಂಕ:28.02.2022 ರಂದು ತಲುಪಿದ್ದು, ಸದರಿ ಪತ್ರದ ಅಂಶಗಳ ಬಗ್ಗೆ ಪರಿಶೀಲಿಸಿ ನಿಯಮಾನುಸಾರ ಅಗತ್ಯ ಕ್ರಮ ಕೈಗೊಳ್ಳಲಾಗುವುದು.

**ಸಂಖ್ಯೆ: ಸಿಒ 143 ಸಿಎಲ್‌ಎಸ್ 2022**

(ಎಸ್.ಟಿ. ಸೋಮಶೇಖರ್)
**ಸಹಕಾರ ಸಚಿವರು**